# ವನ್ಯಜೀವಿಗಳ ರಕ್ಷಕಿ

■ ಪ್ರವೀಣ ಕುಲಕರ್ಣಿ

ವಿಯಟ್ನಾಂನ ಟ್ರಾಂಗ್ ನ್ಯೂಯೆನ್ ಆಗಿನ್ನೂ ಸಣ್ಣ ಹುಡುಗಿ. ಅವರ ಪಕ್ಕದ ಮನೆಯವರು ಕರಡಿಯೊಂದನ್ನು ಹಿಡಿದು ತಂದು, ಅದರ ಎದೆಗೆ ದೈತ್ಯ ಸೂಜಿಯಿಂದ ಚುಚ್ಚುವುದನ್ನು ಕಂಡು ಮಮ್ಮಲ ಮರುಗಿದ್ದಳು. ಮನುಷ್ಯರ ಯಕೃತ್ತಿನ ಕಾಯಿಲೆ ನಿವಾರಣೆಗೆ ಕರಡಿಯ ಪಿತ್ತಕೋಶದ ದ್ರವವನ್ನು ಔಷಧಿಯಾಗಿ ಬಳಸುವ ಪರಿಪಾಟ ಆ ದೇಶದಲ್ಲಿತ್ತು. ವನ್ಯಜೀವಿಗಳ ಜೀವಕ್ಕೆ ಎರವಾಗುವಂತಹ ಇಂತಹ ಹಲವು ಚಿಕಿತ್ಸಾ ವಿಧಾನಗಳು ಅಲ್ಲಿ ಇನ್ನೂ ಜೀವಂತವಾಗಿವೆ.

‘ಹನೋಯ್‌ನ ಪ್ರಾಣಿ ಸಂಗ್ರಹಾಲಯದಲ್ಲಿ ಕೆಲವರು ಬಡಿಗೆ ಹಿಡಿದುಬಂದು ಪ್ರಾಣಿಗಳನ್ನು ಗೋಳು ಹೊಯ್ದುಕೊಳ್ಳುವುದನ್ನು ನೋಡಿದಾಗಲೆಲ್ಲ ನನ್ನ ರಕ್ತ ಕುದಿದುಹೋಗುತ್ತಿತ್ತು’ ಎಂದು ಹೇಳುತ್ತಾಳೆ ಟ್ರಾಂಗ್. ‘ವೈಲ್ಡ್ ಆ್ಯಕ್ಟ್’ ಎಂಬ ವನ್ಯಜೀವಿ ಸಂರಕ್ಷಣಾ ತಂಡವನ್ನೂ ಆಕೆಯೀಗ ಕಟ್ಟಿದ್ದಾಳೆ. ‘ನನ್ನ ಮನೆಯ ಪಕ್ಕದಲ್ಲಿಯೇ ಕರಡಿಗೆ ಆದ ಗತಿಯನ್ನು ನೋಡಿದಾಗಲೇ ವನ್ಯಜೀವಿಗಳ ಸಂರಕ್ಷಣೆಗೆ ಏನಾದರೂ ಮಾಡಬೇಕೆಂಬ ನಿರ್ಧಾರವನ್ನು ಮಾಡಿದ್ದೆ’ ಎಂದು ಆಕೆ ಹೇಳುತ್ತಾಳೆ.

ಜಗತ್ತಿನಲ್ಲಿ ವನ್ಯಜೀವಿಗಳ ಕಳ್ಳಬೇಟೆ ಮತ್ತು ಸಾಗಣೆ ಪ್ರತಿವರ್ಷ ನೂರಾರು ಕೋಟಿ ಡಾಲರ್‌ನ ಕಾಳದಂಧೆಯಾಗಿ ಬೆಳೆದಿದೆ. ವನ್ಯಜೀವಿಗಳಿಗೆ ಕಂಟಕವಾಗಿ ಪರಿಣಮಿಸಿರುವ ಕಳ್ಳ ಬೇಟೆಯನ್ನು ತಡೆಯುವ ಯತ್ನಗಳು ಅಲ್ಲಲ್ಲಿ ನಡೆಯುತ್ತಲೇ ಇವೆ. ವಿಯಟ್ನಾಂನಲ್ಲಿ ಅಂತಹದ್ದೊಂದು ಪ್ರಯತ್ನಕ್ಕೆ ಕೈಹಾಕಿದೆ ‘ವೈಲ್ಡ್ ಆ್ಯಕ್ಟ್’ ತಂಡ.

‘ವೈಲ್ಡ್ ಆ್ಯಕ್ಟ್’ ತಂಡವನ್ನು ಕಟ್ಟಿಕೊಂಡು ಟ್ರಾಂಗ್ ನಡೆಸಿರುವ ಸಾಹಸಕ್ಕಾಗಿ ಬಿಬಿಸಿ ಆಕೆಯನ್ನು ಜಗತ್ತಿನ ಅತ್ಯಂತ ಪ್ರಭಾವಶಾಲಿ ಮಹಿಳೆ ಎಂದೂ ಗುರ್ತಿಸಿದೆ. 31ರ ಹರೆಯದ ಟ್ರಾಂಗ್, ದಕ್ಷಿಣ ಆಫ್ರಿಕಾದ ಕಳ್ಳ ಸಾಗಾಣಿಕೆದಾರರ ಜಾಲವನ್ನು ಭೇದಿಸುವಲ್ಲಿ ಮಹತ್ವದ ಪಾತ್ರ ವಹಿಸಿದಾಕೆ. ವನ್ಯಜೀವಿಗಳ ಮೇಲೆ ‘ಸಾಂಪ್ರದಾಯಿಕ ಔಷಧಿ ಪದ್ಧತಿಯ ಪ್ರಭಾವ’ದ ವಿಷಯವಾಗಿ ಪಿಎಚ್.ಡಿ ಪದವಿಯನ್ನೂ ಪೂರೈಸಿದ್ದಾಳೆ. ವಿಯಟ್ನಾಂನಲ್ಲಿ ವನ್ಯಜೀವಿ ಸಂರಕ್ಷಣೆ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನೂ ಆರಂಭಿಸಿದ ಹೆಗ್ಗಳಿಕೆ ಆಕೆಯದು.

ದಶಕಗಳ ಕಾಲ ಯುದ್ಧದ ಬೇಗುದಿಯಲ್ಲಿ ಬೆಂದಿದ್ದ ವಿಯಟ್ನಾಂ ದೇಶಕ್ಕೆ ವನ್ಯಜೀವಿ ಸಂರಕ್ಷಣೆ ಎಂದರೇನು ಎಂಬ ಅರಿವೇ ಇರಲಿಲ್ಲ. ಈ ಕುರಿತು ಜಾಗೃತಿಯನ್ನು ಮೂಡಿಸಲು ದೊಡ್ಡ ಆಂದೋಲನವನ್ನೇ ರೂಪಿಸಿದಳು ಈ ಯುವತಿ. ಟ್ರಾಂಗ್, ವನ್ಯಜೀವಿ ಸಂರಕ್ಷಣೆಗೆ ಹೊರಟು ನಿಂತಾಗ ಅವಳ ಪಾಲಕರು, ‘ಅದೆಲ್ಲ ಪಾಶ್ಚಿಮಾತ್ಯ ದೇಶಗಳ ಸಿರಿವಂತರ ಕೆಲಸ. ನಮ್ಮಂಥವರಿಗೆಲ್ಲ ಅದು ಆಗದ ಮಾತು’ ಎಂದು ಹೇಳಿದ್ದರಂತೆ.

ಟ್ರಾಂಗ್ ಹೋರಾಟದ ಬಳಿಕ ವಿಯಟ್ನಾಂನಲ್ಲಿ ಈಗೇನಾಗಿದೆ ನೋಡಿ. ವನ್ಯಜೀವಿಗಳ ಸಂರಕ್ಷಣೆಗೆ ದೇಶದಲ್ಲಿ ಕಾಯ್ದೆಗಳು ರಚನೆಯಾಗಿವೆ. ಕರಡಿಗಳ ಪಿತ್ತರಸ ಹೀರುವ ಪ್ರಮಾಣ ಕಳೆದ ಹದಿನೈದು ವರ್ಷಗಳಲ್ಲಿ ಶೇ 90ರಷ್ಟು ಕಡಿಮೆಯಾಗಿದೆ. ಹಾಗಂತ ಟ್ರಾಂಗ್ ಖುಷಿಯಿಂದ ಸುಮ್ಮನೆ ಕೈಕಟ್ಟಿ ಕುಳಿತಿಲ್ಲ. ಏಕೆಂದರೆ, ಖಡ್ಗಮೃಗದ ಕಳ್ಳಬೇಟೆ ಆ ದೇಶದಲ್ಲಿ ಇನ್ನೂ ದೊಡ್ಡ ಪ್ರಮಾಣದಲ್ಲೇ ನಡೆಯುತ್ತಿದೆ. ಅಲ್ಲದೆ, ವನ್ಯಜೀವಿ ಕಳ್ಳ ಸಾಗಣೆಯ ಪ್ರಮುಖ ತಾಣವಾಗಿ ಈಗಲೂ ವಿಯಟ್ನಾಂ ಬಳಕೆ ಆಗುತ್ತಿದೆ. ಇದೆಲ್ಲದರ ಅರಿವು ಆಕೆಗಿದೆ.




ವನ್ಯಜೀವಿ ಕಳ್ಳ ಸಾಗಣೆ ವಿರುದ್ಧ ಜನರೇ ಧ್ವನಿ ಎತ್ತುವಂತೆ ಜಾಗೃತಿ ಮೂಡಿಸುವ ಕೆಲಸದಲ್ಲಿ ಆಕೆಯೀಗ ನಿರತಳಾಗಿದ್ದಾಳೆ. ಕಳ್ಳ ಸಾಗಣೆ ತಡೆಯಲು ಅಂತರರಾಷ್ಟ್ರೀಯ ನೀತಿ ನಿರೂಪಣೆಗೆ ಒತ್ತಾಯದ ಕೇಳಿ ಬರುವಂತೆ ಹಲವು ದೇಶಗಳ ಸ್ವಯಂಸೇವಾ ಸಂಸ್ಥೆಗಳ ಜತೆ ಕೆಲಸ ಮಾಡುತ್ತಿದ್ದಾಳೆ.

ವನ್ಯಜೀವಿ ಸಂರಕ್ಷಣೆಯಲ್ಲಿ ಮಹಿಳೆಯರು ಇಲ್ಲವೇ ಇಲ್ಲ ಎನ್ನುವಷ್ಟು ಅವರ ಸಂಖ್ಯೆ ಗೌಣವಾಗಿದೆ. ಮುಂಚಿನಿಂದಲೂ ಈ ಕ್ಷೇತ್ರದಲ್ಲಿ ಪುರುಷರದೇ ಸಿಂಹಪಾಲು. ‘ಹೌದು, ವನ್ಯಜೀವಿ ಸಂರಕ್ಷಣೆಗೆ ನಿಂತ ಮಹಿಳೆಯರ ಸಂಖ್ಯೆ ತುಂಬಾ ಕಡಿಮೆ ಇದೆ. ಈ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚಾಗಿ ಧುಮುಕುವ ಅಗತ್ಯವಿದೆ’ ಎಂದು ಆಕೆ ಹೇಳುತ್ತಾಳೆ. ಯುವತಿಯರಿಗೆ ಪ್ರೋತ್ಸಾಹದಾಯಕವಾದ ಕೃತಿಯನ್ನೂ ಆಕೆ ಬರೆದಿದ್ದಾಳೆ. ವನ್ಯಜೀವಿ ಸಂರಕ್ಷಣೆಯಲ್ಲಿ ತಾನು ತುಳಿದ ಹೆಜ್ಜೆ ಗುರುತುಗಳನ್ನು ದಾಖಲಿಸಲು ಟ್ರಾಂಗ್ ಬರೆದಿರುವ ಕೃತಿಯ ಹೆಸರು ‘Saving Sorya’.

ಬಿಬಿಸಿ ಡಾಕ್ಯುಮೆಂಟರಿಗಳನ್ನು ನೋಡುತ್ತಾ ಇಂಗ್ಲಿಷ್ ಅನ್ನೂ ಕಲಿಯುತ್ತಾ, ವನ್ಯಜೀವಿ ಪ್ರೇಮವನ್ನೂ ಬೆಳೆಸಿಕೊಂಡವಳು ಆಕೆ. ವನ್ಯಜೀವಿ ಸಂರಕ್ಷಣೆಯ ಅಗತ್ಯವನ್ನು ಪ್ರತಿಪಾದಿಸುತ್ತಾ ವಿಯಟ್ನಾಂ ಸರ್ಕಾರಕ್ಕೆ ಪತ್ರವನ್ನೂ ಬರೆಯುತ್ತಿದ್ದಳು. ಇಂಗ್ಲೆಂಡ್‌ನಲ್ಲಿ ಓದಲು ಸ್ಕಾಲರ್‌ಶಿಪ್ ಪಡೆದ ಆಕೆ, ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ವನ್ಯಜೀವಿ ಸಂರಕ್ಷಣೆ ವಿಷಯದಲ್ಲೇ ಮಾಸ್ಟರ್ಸ್ ಮಾಡಿದಳು. ಓದು ಮುಗಿಸಿ ತವರಿಗೆ ವಾಪಸ್ ಆಗುತ್ತಿದ್ದಂತೆ ವೈಲ್ಡ್ ಆ್ಯಕ್ಟ್ ಸಂಘಟನೆ ಕಟ್ಟಿದಳು. ಟ್ರಾಂಗ್‌ನಿಂದಾಗಿ ಹಲವು ಕಳ್ಳ ಬೇಟೆಗಾರರು ಈಗ ಜೈಲು ಪಾಲಾಗುವಂತಾಗಿದೆ.

‘ದಕ್ಷಿಣ ಆಫ್ರಿಕಾದ ಕಳ್ಳ ಬೇಟೆಗಾರರ ಜಾಲವನ್ನು ಭೇದಿಸಿದ್ದು ಹೇಗೆ’ ಎಂದು ಕೇಳಿದರೆ, ‘ನಾನು ವನ್ಯಜೀವಿ ಸರಕುಗಳ ಗ್ರಾಹಕಳ ಸೋಗಿನಲ್ಲಿ ಹೋಗಿದ್ದೆ. ವಿಷಯವನ್ನು ಹೊರತೆಗೆಯುವುದು ಕಷ್ಟವಾಗಲಿಲ್ಲ’ ಎಂದು ಉತ್ತರಿಸುತ್ತಾಳೆ. ಈಗಲೂ ಪ್ರತಿದಿನ ಕನಿಷ್ಠ ಮೂರು ಖಡ್ಗಮೃಗಗಳು ಕಳ್ಳ ಬೇಟೆಗಾರರಿಗೆ ಬಲಿಯಾಗುತ್ತಿವೆ. ಅದನ್ನು ಸಂಪೂರ್ಣ ತಡೆಗಟ್ಟಬೇಕು ಎನ್ನುವ ಕಾಳಜಿಯನ್ನು ಟ್ರಾಂಗ್ ಮೆರೆಯುತ್ತಾಳೆ. ಅದಕ್ಕಾಗಿ ಟೊಂಕಕಟ್ಟಿ ಹೋರಾಟಕ್ಕೆ ಸಜ್ಜಾಗಿದ್ದಾಳೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65